ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯಲ್ಲಿ ಸಮುದ್ರ ತಡೆಗೋಡೆ ಸಂಬಂಧ ಕಾಮಗಾರಿ ಕೈಗೊಳ್ಳಲು 2000-2001ನೇ ಸಾಲಿನಲ್ಲಿ ರೂ. 151.07 ಲಕ್ಷ ಬಿಡುಗಡೆಯಾಗಿದೆಯೆಂದು ಉತ್ತರದಲ್ಲಿ ಮಾನ್ಯ ಸಚಿವರು ತಿಳಿಸಿದ್ದಾರೆ. ಬಿಡುಗಡೆಗೊಂಡಿರುವ ಹಣ ಶಾಶ್ವತ ತಡೆಗೋಡೆಯನ್ನು ನಿರ್ಮಿಸುವುದಕ್ಕಾಗಿಯೇ? ಅಥವಾ ತಾತ್ಕಾಲಿಕ ತಡೆಗೋಡೆ ನಿರ್ಮಿಸುವುದಕ್ಕಾಗಿಯೇ ಎಂಬುದನ್ನು ತಿಳಿಸಬೇಕು. ಶಾಶ್ವತ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಕಾಯಲಾಗುತ್ತಿದೆಯೆಂದು ತಿಳಿಸಿರುವುದರಿಂದ ಪ್ರಸ್ತಾವನೆ ತಯಾರಾದದ್ದು ಯಾವಾಗ? ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಯಾವಾಗ ಹೋಗಿದೆ ಎಂಬುದನ್ನು ತಿಳಿಸಬೇಕು. ಹಾಗೂ 123 ಕಾಮಗಾರಿಗಳಿಗೆ ಹಣ ಪಾವತಿಯಾಗದೆ ಉಳಿದಿರುತ್ತವೆ ಎಂದು ಹೇಳಿರುವುದಕ್ಕೆ ಕಾಮಗಾರಿಗಳಿಗೆ ಹಣ ಪಾವತಿಯಾಗದೆ ಉಳಿದಿರುವುದು ಇಡೀ ಕರಾವಳಿಯಲ್ಲಿಯೇ? ಅಥವಾ ಉಡುಪಿ ಜಿಲ್ಲೆಯಲ್ಲಿಯೇ? ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಡಲಾಗಿದೆ. ವಾಸ್ತವವಾಗಿ ಅದಕ್ಕೆ 135.83 ಲಕ್ಷ ರೂಪಾಯಿಗಳನ್ನು ಇಟ್ಟಿರತಕ್ಕದ್ದು. ಆದರೆ ಬಿಡುಗಡೆ ಮಾಡಿದ್ದು 151.7 ಲಕ್ಷ ರೂಪಾಯಿಗಳು ಅಂದರೆ ಹೆಚ್ಚಾಗಿಯೇ ಹಣವನ್ನು ಬಿಡುಗಡೆ ಮಾಡಲಾಗಿದೆ. ತಾತ್ಕಾಲಿಕವಾಗಿ ತಡೆಗೋಡೆಯನ್ನು ನಿರ್ಮಾಣ ಮಾಡಲು ಈ ಹಣವನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಉಡುಪಿ ಜಿಲ್ಲೆಯಲ್ಲಿ 123 ಕಾಮಗಾರಿಗಳು ಬರುತ್ತದೆ, ಇದರ ಅಂದಾಜು 3 ಕೋಟಿ ರೂಪಾಯಿಗಳಾಗುತ್ತದೆ. ಇದರ ಬಗ್ಗೆ 141 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಈಗಾಗಲೇ ನಾವು ಕಳಿಸಿಕೊಟ್ಟಿದ್ದೇವೆ. ಇದರಲ್ಲಿ ಕೇಂದ್ರ ಸರ್ಕಾರ 75 ಪರ್ಸೆಂಟ್ ರಾಜ್ಯ ಸರ್ಕಾರ 25 ಪರ್ಸೆಂಟ್ ಹಣವನ್ನು ಭರಿಸುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕೇಂದ್ರ ಸರ್ಕಾರಕ್ಕೆ ಯಾವಾಗ ಹೋಗಿದೆ?

ಶ್ರೀ ಬಿ. ರಮಾನಾಥ ರೈ : ತಮಗೆ ಗೊತ್ತಿರುವಂತೆ ಇದು ನಮ್ಮ ಇಲಾಖೆಗೆ ಹಸ್ತಾಂತರವಾಗಿದೆ. ಇದರ ಬಗ್ಗೆ ಅನಂತರ ಪರಿಶೀಲನೆ ಮಾಡಿ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಚನ್ನಿಗಪ್ಪನವರೆ, ತಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಇದನ್ನು ಖಂಡಿತವಾಗಿ ಮುಂದಿನ ಸೋಮವಾರ ತೆಗೆದುಕೊಳ್ಳುತ್ತೇನೆ.

ಬೆಳಗಾಂ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ ಮಂಜೂರಾದ ಕಾಮಗಾರಿಗಳ ಬಗ್ಗೆ

450 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಮೊತ್ತದ ಕೆಲಸ ತೆಗೆದುಕೊಳ್ಳಲಾಗಿದೆ? ಮತಕ್ಷೇತ್ರದ ಪ್ರಕಾರ ರಸ್ತೆ ಹಾಗೂ ವಿವರ ನೀಡುವುದು?

ಅ) ಮಂಜೂರಾದ ಕೆಲಸಗಳಲ್ಲಿ ಇಲ್ಲಿಯವರೆಗೆ ತಾಂತ್ರಿಕ ಮಂಜೂರಾತಿಯನ್ನು ಎಷ್ಟು ಕೆಲಸಗಳಿಗೆ ನೀಡಲಾಗಿರುವುದಿಲ್ಲ ಕೆಲಸದ ವಿವರ ಹಾಗೂ ಮಾಹಿತಿ ನೀಡುವುದು ?

ಇ) ನಬಾರ್ಡ್ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಹಣ ಖರ್ಚಾಗಿರುವುದು ಹಾಗೂ ಎಷ್ಟು ಹಣ ಬಾಕಿ ಇರುವುದು ?

ಈ) ನಬಾರ್ಡ್ ಮೀಟಿಂಗ್‌ನಲ್ಲಿ ಬೆಳಗಾಂ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದಲ್ಲಿ ತೆಗೆದುಕೊಳ್ಳಬೇಕೆಂದು ಒಪ್ಪಿಗೆ ನೀಡಿದ ಎಷ್ಟು ಕೆಲಸಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಇದುವರೆಗೂ ನೀಡಲಾಗಿರುವುದಿಲ್ಲ ?

ಉ) ಹಣಕಾಸಿನ ತೊಂದರೆಯಿಂದ ಬೈಲಹೊಂಗಲ ಮತಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಮಂಜೂರಾದ ಕೆಲಸಗಳು ಮಂದಗತಿಯಿಂದ ನಡೆದ ಸಂಗತಿ ನಿಜವೇ ?

ಶ್ರೀ ಧರ್ಮ್‌ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ ಬೆಳಗಾವಿ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ ಈವರೆಗೆ ರೂ. 52.96 ಕೋಟಿ ಮೊತ್ತದ 100 ರಸ್ತೆ ಮತ್ತು ಸೇತುವೆ ಕಾಮಗಾರಿಗಳು ಮಂಜೂರಾಗಿವೆ. ಮತ ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) 7 ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಬೇಕಿದೆ. ಹಾಗೂ 1 ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕಿದೆ. ವಿವರ ಅನುಬಂಧದಲ್ಲಿ ನೀಡಿದೆ.

ಇ) ನಬಾರ್ಡ್ ಯೋಜನೆಯಡಿ ಇಲ್ಲಿಯವರೆಗೆ ಬೆಳಗಾಂ ಜಿಲ್ಲೆಯಲ್ಲಿ ರೂ. 26.37 ಕೋಟಿ ವೆಚ್ಚ ಮಾಡಲಾಗಿದೆ, ಹಾಗೂ ರೂ. 26.59 ಕೋಟಿ ಮೊತ್ತದ ಕೆಲಸ ಬಾಕಿ ಇದೆ.

ಈ) ನಬಾರ್ಡ್ ಅನುಮೋದನೆ ನೀಡಿರುವ ಬೈಲಹೊಂಗಲ ಮತಕ್ಷೇತ್ರದ ಎಲ್ಲಾ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಒಂದು ರಸ್ತೆ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಬೇಕಾರುತ್ತದೆ. ವಿವರ ಅನುಬಂಧದಲ್ಲಿ ನೀಡಿದೆ.

ಉ) ಇಲ್ಲ.

ANNEXURE TO STARRED LAQ NO. 4182

Sl No.	Constituency	Name of Work	Est cost Rs. in lakhs	Remarks
		R.I.D.F -II 1996-97		
1.	Arabhavi	Pipe Culvert in Km. 3.00 on Kolavi cross to Kundargi cross Road.	17.70	
2.	Athani	Pipe Culvert (L.L.C) at Km. 6.95 on Athani Masarguppi Shirur on Padegaon Road across Agrani river near Masaraguppi	28.63	
3.	Chikkodi	Pipe Culvert across nala in Km. 8.00 on Chikkodi. Hattargi Road. (B. 0023)	13.39	
4.	Chikkodi	Pipe Culvert in Km 21.10 and 22.69 on Nandi Nippani	8.91	
5.	Gokak	Pipe Culvert across nala at Km. 7.00 on Tigadi Sundholli Bhairanatti	13.55	
6.	Nippani	Pipe Culvert across Pandavanala at Km 5.00 on Galatga Khadakhlat Road.	23.38	
7.	Parasgad	Pipe Culvert (C.D) at Km. 14.00 on Yargatti Yadwad Road.	3.00	
8.	Sadalga	Bridge across Doodha Ganga river near Mangoor at Km. 23.00 on Makve Kurandwad Road.	126.00	
9.	Chikkodi	Bridge across Krishna river near Manjri	605.48	
		R.I.D.F - III		
10.	Arabhavi	Improvements to Tigadi Betageri Road.	40.00	
11.	Athani	Improvements to Athani Abbihal jambagi Aralikatti upto State Border	45.84	
12.	Athani	Construction of low level causeway across Agrani Nala Kokale via, Khilegaon Basavana Temple	42.97	
13.	Bagewadi	Improvements to K.K. Kop Nagarahalli Road Badas Kokadolli, Ankalgi Road	44.53	

1	2	3	4	5
14.	Bagewadi	Improvements to Devagin Kattanabhavi Road 0.00 to 6.00 Km. (R0180)	17.74	
15.	Bailhongal	Improvements to Kenganur Sangolli Gadadur HoleNagalapur Road upto Bekwas Belwadi Road in Km 0.00 to 7.80	37.00	
16.	Bailhongala	Improvements to Marakumbi Munavalli via Murgod, Sogal Road.	38.26	
17.	Bailhongala	Improvements to Karikatti Turkara Shigihalli Road	56.55	
18.	Belgaum	Hindalga Kangrali Road (Alluminium Factory Road) 0.00 to 4.00	20.50	
19.	Chikkodi	Improvements to Hattarwal Majalatti Mugali Kamthyanathi Bennalli to join M.N.Road.	22.79	
20.	Gokak	Improvements to Kanasgeri to Kadatagalli	20.78	
21.	Gokak	Improvments to Yadagud to Neiganta Road (R0172)	18.71	
22.	Gokak	Improvements to Hirehatti to Makkalageri 0 to 5 Km	14.09	
23.	Gokak	Construction of Bridge cum Barrage near Kundargi village	15.00	
24.	Hukkeri	Construction of bridge across Hirayakashi river at Ch. 9.05 of Chikkodi. Hukkeri Hattarga Road	233.00	
25.	Kagawad	Improvements to Koligudda Ainapur Road.	34.00	
26.	Kagawad	Construction of bridges in Km 12 & 14 of Athani Tangadi Ainapur Mungawati Road	18.92	
27.	Khanapur	Byadratii Gundayanatti Road 0.00 to 11.00	58.50	
28.	Kittur	Improvements to Road from NH 4 to Ugarkhod Sheegihalli Basapur Road.	18.24	

1	2	3	4	5
29.	Kittur	Impts. and Ashpt to Desnur Nesargi Road km 0.00 to 6.00	20.51	
30.	Nippani	Formation of Sulga to Mathwad to join NH4 Road 0.00 to 4.00	17.49	
31.	Nippani	Formation of Road from NH4 to Hanabar wadi to Kaganahalli Road 0.7 kms	24.49	
32.	Parasgad	Improvements to link Road to join Raichur Bachi Road and Gokak Nargund Road up to Akkisagar Km 0 to 24.50	74.00	
33.	Parasgad	Improvements to Madangeri Shivapur Yerizigvi Kolibi, Koribidre Road.	49.03	
34.	Raibag	Improvements to Sameerwadi Handigund Road	53.00	
35.	Raibag	Improvements to Paramanandwadi Suttatti Chunchani Road	25.53	
36.	Ramadurga	Construction of bridge across Malaprabha river near Hampi holi	131.63	
37.	Sadalga	Improvements to Road from Donewadi to State Border 0.00 to 8.50	42.00	
38.	Chikkodi	Improvements to Chinchani Shiragavi Nej cross upto broder on Ichalkaranji	100.37	
39.	Sankeshwar	Metalling and Asphalting to Kanagale Borgal Road in Km 1 to 13.00	51.50	
40.	Sankeshwar	Asphalting of Yadawadagate to Sankeshwar Road	31.42	
		R.I.D.F - IV		
41.	Athani	Masarguppi Hanamapur cross Madhana bhavi Road in Athani taluk	63.01	
42.	Bagewadi	Halga Tarihal Chandahosur Tigadi upto Taluka border in Belgaum taluk	14.20	
43.	Bagewadi	Improvements to Kangrali-Agasagi-Suthagatti Road	38.50	

1	2	3	4	5
44.	Bagewadi	Belgaum Budhihal Gokak Road in Belgaum taluk	26.07	
45.	Bailhongala	Murgod Inchal Road via Telakoppa Chachadi Gothamar Hirebudanur Road in Bailhongal taluk	64.15	
46.	Chikkodi	Improvements to Jainapur-Karoshi-Bambalwad Road to Join M.N. Road via Kamatyanatti	36.00	
47.	Chikkodi	Nainglaz Hattawat Manganur Road in Chikkodi taluk	36.90	
48.	Gokak	Hoolikatti Shilthabhavi Road in Gokak taluk	23.10	
49.	Gokak	Gokak Koujalagi Road in Gokak taluk.	72.00	
50.	Gokak	Kolvi to Mamadapur in Gokak taluk.	17.00	
51.	Hukkeri	Yadwad Belvi Hulikatti Raxi Road in Hukkeri taluk.	56.00	
52.	Kagawad	Athani Tangadi Ainapur Mangawathi Road in Athani taluk.	38.50	
53.	Kagawad	Athani Tigadi Ainapur Road in Athani taluk.	43.00	
54.	Kagawad	Dharur Nandi Ingalgaon Saptsagar Teerth Road in Athani	52.80	
55.	Kagawad	Causeway across Agrani nala in Km 7 of Madhabavi Kaloti Tavasi Anthpura Road in Athani Taluk	50.00	
56.	Khanapur	Khanapur Hemmadaga Road in Khanapur taluk	60.92	
57.	Khanapur	Constn of bridge in 50th Km on Khanapur Hemmadaga Road in Khanapur taluk.	27.50	
58.	Khanapur	Construction of bridge at 50.80 Km on Khanapur Hemmada Road	18.44	

1	2	3	4	5
59.	Kittur	Kittur Kuluvalli Road to join NH4 in Bailahongal taluk.	50.00	
60.	Kittur	Improvements to Sampagaon-Karadigudda Road in Bailhnogal taluk	35.50	
61.	Kittur	Improvements to Bailur-Thigadolli Devarshigihalli Road in Bailhongal taluk	43.00	
62.	Parasgad	Akkisagar Mugalihar Melligeri Dasnal Road in Saundatti taluk	49.00	
63.	Raibag	Improvements to Road from Chikkodi Railway Station to Katakanbhavi Soundatti Kundagal-Mugalkod-Handigund Road.	82.00	
64.	Ramdurga	Turnur Udapudit Road in Ramdurga taluk.	38.20	
65.	Ramdurga	Improvements to Road from Bannur to Bannur Thanda	18.00	
66.	Sankeshwar	Gowdawad Kochieri Ganwal Road and Hebbal Kocheri Road in Hukkeri taluk.	60.50	
67.	Sankeshwar	B.Alur to join PB Road in Hukkeri taluk.	35.00	
		R.I.D.F.-V		
68.	Athani	Impts to Kakamari Telsang Savalagi Road in Athani taluk	85.00	
69.	Bagewadi	Bendigeri to NH 4 via Halagimardi, KK Koppa in Bagewadi taluk	27.32	
70.	Bagewadi	Impts to Road from Kalyal bridge to Nandi via Kamalapur in Bagewadi taluk.	48.00	
71.	Bagewadi	Impts to Karikatti Masthiholi via Siddanahalli in Bagewadi taluk.	19.50	
72.	Bagewadi	Impts to Kamari Ankalagi Road via Hudali in Bagewadi taluk.	18.58	
73.	Bailhongala	Improvements & asphalting to Doddavattu to Karikatti Road in Bailhongal taluk	23.10	

1	2	3	4	5
74.	Bailhongal	Impts to Budarkatti Doddawad Road via Chikkaballikatti in Bailhongala taluk.	20.30	
75.	Belgaum	Improvements & asphaulting to Kukkadolli to Desure Road in Belgaum taluk.	24.62	
76.	Hukkeri	Improvements to Goudawad Awargol Road in Hukkeri taluk.	89.48	
77.	Hukkeri	Improvements to Road from Chikkodi Hattargi to join Jaganur Railway Station via Belavi Sarapur Belladbagewadi in Hukkeri taluk.	34.60	
78.	Hukkeri	Impts to Nagarmunoli Hanchinal B. Bagewadi Donewad Road in Hukkeri taluk.	96.98	
79.	Hukkeri	Impts to Madihalli Shiragaon Road in Hukkeri taluk.	15.80	
80.	Hukkeri	Impts to Road from Jaganur to join Mudhol Nippani Road via Jodadahatti Mamadapur in Hukkeri taluk	42.60	
81.	Kagawad	Impts to Kouligudda Shegunashi Road in Kagawad taluk	68.00	
82.	Kagawad	Impts to Athani Satti Maheswadgi Road in Athani taluk	69.86	
83.	Kittur	Impts to Halaga Thigadi Road in Bailhongal taluk.	43.00	
84.	Kittur	Bridge on Sampagaon Kuragunda Road in Bailhongal taluk	31.18	
85.	Nippani	Improvements to Benadi Jainwadi Bhivashi Jatrat Akkol Road in Chikkodi taluk.	62.44	
86.	Nippani	construction of bridge across nala in 2nd Km of Jattara Akkol Road in Chikkodi taluk.	77.35	
87.	Parasgad	Improvements to Soundatti Betsur Gumagaon Road in Soundatti taluk.	35.18	

1	2	3	4	5
88.	Raibag	Kempathi Mekali Bendiwad Road in Gokak taluk.	99.00	
89.	Raibag	Impts to Biradi Saundatti Road in Raibag taluk.	79.50	
90.	Ramdurga	Ramadurga Bochobala Road in Ramdurga taluk	59.31	
91.	Ramdurga	Impts to Kagol Yeagati Road in Ramdurga taluk.	75.00	
92.	Sadalga	Bridge across Dhoodhaganga river on Examba Dhanawada Road in Chikkodi taluk.	200.00	
93.	Uchagaon	Construction of bridge across river Markandeya near Kangrali	156.89	A/A to be accorded
		R.I.D.F. - VI		
94.	Bailhongala	Impts to Somanahatti Mekalamaradi Gajamanal Vannor Road in Bailhongala taluk.	31.43	Technical sanction to be accorded
95.	Chikkodi	Impts to Ankali Kadakur Road in Chikkodi taluk.	39.00	
96.	Nippani	Impts to Kadakat Manchiwadi to join Baloba cross Road in Chikkodi taluk.	43.00	
97.	Nippani	Impts to Nippani Shiraguppi Shedur Road in Chikkodi taluk.	19.00	
98.	Nippani	NH 4 to join MK Road via Kaganahalli Hanchinal in Chikkodi taluk.	19.00	
99.	Sadalga	Impts to Boj to Sri Sangameshwara Temple via Bojawadi Kunnur in Chikkodi taluk.	80.00	
100	Ramdurga	Impts to Mullur Sureban Maradgi Road in Ramdurga taluk.	54.46	

ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಹಣಕಾಸಿನ ತೊಂದರೆ ಇಲ್ಲವೆಂದು ಹೇಳುತ್ತಾರೆ. ಹಾಗಿದ್ದರೆ ಕಳೆದ ಆರು ತಿಂಗಳಿನಿಂದ ಬೆಳಗಾಂ ಜಿಲ್ಲೆಯಲ್ಲಿ, ಬಂದಿದೆಯೇ ಹಾಗೆ ಬಂದಿದ್ದರೆ ಈ ಬಗ್ಗೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಧರ್ಮ್ ಸಿಂಗ್ : ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಗೆ ನಬಾರ್ಡ್ ಯೋಜನೆಯಲ್ಲಿ ಇದುವರೆಗೆ 52.96 ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸಲಾಗಿದೆ. ಇದರಲ್ಲಿ ಎಲ್ಲಾ ಕಡೆ ಕೆಲಸ ಪ್ರಾರಂಭವಾಗಿದೆ. ಆದರೆ ಕೆಲಸ ಮಾಡುವುದರಲ್ಲಿ ಸ್ವಲ್ಪ ತಡವಾಯಿತು. ಏಕೆಂದರೆ ನಾವು ಪ್ರೀ-ಕ್ವಾಲಿಫಿಕೇಷನ್ ಆಫ್ ಟೆಂಡರನ್ನು ಸಾಕಷ್ಟು ಒತ್ತಾಯ ಮಾಡುತ್ತಿದ್ದೇವೆ. ಯಾರಾದರೂ ಗುತ್ತಿಗೆದಾರರು ನಬಾರ್ಡ್ ಕೆಲಸವನ್ನು ಮಾಡಬೇಕಾಗಿದ್ದರೆ ಹಾಟ್ ಮಿಕ್ಸ್ಡ್ ಪ್ಲಾಂಟ್ ಮಾಡಬೇಕಾಗುತ್ತದೆಂದು ಹೇಳಿದ್ದೇವೆ. ಆದ್ದರಿಂದ ಇದರಲ್ಲಿ ಸಹ ತಡವಾಗಿದೆ. ಮೊನ್ನೆ ನಾನು ಬೆಳಗಾಂ ಜಿಲ್ಲೆಯ ಕಂದಾಯ ವಿಭಾಗದಲ್ಲಿ ಕೆಲಸಕಾರ್ಯಗಳು ಹೇಗೆ ನಡೆಯುತ್ತಿದೆ ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿದ್ದೇವೆ. ಅಲ್ಲಿಗೆ ಹೋಗಿದ್ದಾಗ ಪತ್ರಕರ್ತರ ಸಮ್ಮೇಳನದಲ್ಲಿ ಕೂಡ ಸಂಬಂಧಪಟ್ಟ ಇಂಜಿನಿಯರ್‌ಗಳು ಕೆಲಸವನ್ನು ಚುರುಕು ಮಾಡಬೇಕೆಂದು ಸೂಚಿಸಿದ್ದೇನೆ. ಸಾಕಷ್ಟು ಬಡ್ಡಿ ಕೊಟ್ಟು ನಬಾರ್ಡ್‌ನಿಂದ ಹಣವನ್ನೇನು ತೆಗೆದುಕೊಳ್ಳುತ್ತೇವೆ ಅದರಿಂದ ಸರಿಯಾದ ಕೆಲಸವಾಗಬೇಕು. ಮಾನ್ಯ ಸಿಂಧ್ಯರವರು ಒಂದು ದಿವಸದಲ್ಲಿ ಮಾಡಿದ್ದ ರಸ್ತೆ ಕೆಟ್ಟು ಹೋಗಿದೆಯೆಂದು ಹೇಳಿದ್ದಾರೆ. ಆ ರೀತಿ ಏಕೆ ಆಗುತ್ತಿತ್ತು ಎಂದರೆ ಈ ಮೊದಲು ನಾವು ಮಿನಿ-ಮಿಕ್ಸ್ಡ್ ಪ್ಲಾಂಟ್‌ನಲ್ಲಿ ಕೆಲಸ ಮಾಡಲು ಅವಕಾಶ ಕೊಡುತ್ತಿದ್ದೆವು. ಆದರೆ ಈಗ ಹಾಟ್ ಮಿಕ್ಸ್ಡ್ ಪ್ಲಾಂಟ್‌ನಲ್ಲಿ ಕೆಲಸ ಮಾಡುವುದಕ್ಕೆ ಮಾತ್ರ ಅವಕಾಶ ಕೊಡುತ್ತಿದ್ದೇವೆ. 25 ಲಕ್ಷ ಸಹಾಯಕ ಅಭಿಯಂತರಿಗೆ, 50 ಲಕ್ಷ ಕಾರ್ಯಪಾಲಕ ಅಭಿಯಂತರಿಗೆ, 75 ಲಕ್ಷ ಟೆಂಡರ್ ಪಾಸ್ ಮಾಡುವ ಸೂಪರಿಂಟೆಂಡೆಂಟ್‌ರವರಿಗೆ ಈ ರೀತಿ ಟೆಂಡರನ್ನು ಕಮೀಷನ್ ಮಾಡಿದರೆ ಆಗುವುದಿಲ್ಲ. ಎಲ್ಲೆಲ್ಲಿ ಕೆಲಸವನ್ನು ತಡ ಮಾಡುತ್ತಾರೆ ಅದರ ಬಗ್ಗೆ ಸೂಚನೆ ಕೊಟ್ಟು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಅಲ್ಲಿರುವ ಕಾರ್ಯಪಾಲಕ ಮತ್ತು ಸಹಾಯಕ ಅಭಿಯಂತರುಗಳಿಂದ ಆ ಹಣವನ್ನು ಸಹ ವಸೂಲಿ ಮಾಡಲು ಪರಿಶೀಲನೆ ಮಾಡುತ್ತಿದ್ದೇವೆ. ಅಲ್ಲಿ ಒಳ್ಳೆಯ ರೀತಿಯಲ್ಲಿ ಕೆಲಸಕಾರ್ಯಗಳಾಗಲು ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಬೈಲಹೊಂಗಲದಲ್ಲಿ ಹಾಲಿ 7 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಆದರಲ್ಲಿ ಒಂದು ಕೆಲಸಕ್ಕೆ ಮಾತ್ರ ತಾಂತ್ರಿಕ ಮಂಜೂರಾತಿ ನೀಡಬೇಕಾಗಿದೆ. ಅದನ್ನೂ ಸಹ ನೀಡುತ್ತೇವೆ.

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ : ಕಳೆದ ಆರು ತಿಂಗಳಿಂದ ಕೆಲಸ ಸಂಪೂರ್ಣವಾಗಿ ನಿಂತಿದೆ. ಇದಕ್ಕೆ ಕಾರಣವೇನು?

ಶ್ರೀ ಧರ್ಮ್ ಸಿಂಗ್ : ಅಲ್ಲಿ ಕೆಲಸ ನಿಂತಿಲ್ಲ. ತಮಗೆ ವಾಸ್ತುಸ್ಥಿತಿ ಬಗ್ಗೆ ಹೇಳುವುದಾದರೆ, ಅಧಿಕಾರಿಗಳ ವರ್ಗಾವಣೆಯಾದಾಗ ಅವರುಗಳು ಸಂಬಂಧಪಟ್ಟ ಸ್ಥಳಕ್ಕೆ ಹೋಗಿ ಜಾಯಿನ್ ಆಗಲು ಎರಡು ತಿಂಗಳುಗಳಾಯಿತು. ಈಗ ಎಲ್ಲಾ ಸೆಟ್‌ರೈಟ್ ಆಗಿದೆ. ಕೆಲಸ ನಿಂತಿಲ್ಲ, ಆದರೆ ತುರ್ತಾಗಿ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಆರ್.ಐ.ಡಿ.ಎಫ್-2 ಇಲ್ಲಿ ಆರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೃಷ್ಣ ನದಿಯ ಮೇಲೆ ಬ್ರಿಡ್ಜನ್ನು ಕಟ್ಟಿ ಮುಗಿಸಿದ್ದಾರೆ. ಅದೇ ಆರ್.ಐ.ಡಿ.ಎಫ್.-2, ರಲ್ಲಿ ದೂದ್‌ಗಂಗಾ ನದಿಯ ಬ್ರಿಡ್ಜ್‌ನ ಕಾಮಗಾರಿ ಅರ್ಧಕ್ಕೆ ನಿಂತಿದೆ. ಆ ಬ್ರಿಡ್ಜ್‌ನ ಕಾಮಗಾರಿಯನ್ನು ಯಾವಾಗ ಮುಗಿಸುತ್ತೀರಿ? ಮಾನ್ಯ ಸಚಿವರು ಬೆಳಗಾಂಗೆ ಬಂದಿದ್ದಾಗ ಸಂಬಂಧಪಟ್ಟ ಗುತ್ತಿಗೆದಾರರನ್ನು ನಮ್ಮ ಸಮಕ್ಷಮ ಕರೆದು ದೂದ್‌ಗಂಗಾ ಬ್ರಿಡ್ಜ್‌ನ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಿಕೊಡಬೇಕೆಂದು ಹೇಳಿದ್ದರು. ಆದರೆ ಇದುವರೆಗೆ ಆ ಕೆಲಸ ಪ್ರಾರಂಭವಾಗಿಲ್ಲ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು. 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹಲವಾರು ವರ್ಷಗಳಿಂದ ಕೃಷ್ಣ ನದಿಯ ಮೇಲೆ ಇರುವ ಬ್ರಿಡ್ಜ್‌ನ ಕೆಲಸವನ್ನು ಪೂರ್ತಿ ಮಾಡಿಕೊಟ್ಟಿದ್ದಾರೆ, ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಒಂದು ಕೋಟಿ 26 ಲಕ್ಷ ರೂಪಾಯಿಗಳ ವೆಚ್ಚದ ಆರ್.ಐ.ಡಿ.ಎಫ್-(2)ರ ಕಾಮಗಾರಿಯನ್ನು ಬೇಗನೆ ಪೂರ್ತಿ ಮಾಡಿಸಿಕೊಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ಧರ್ಮಸಿಂಗ್ : ನಬಾರ್ಡ್‌ನವರು ಆರ್.ಐ.ಡಿ.ಎಫ್-(2)ರ ಕಾಮಗಾರಿಗಳನ್ನು ಮಾಡಲು ಈಗಾಗಲೆ ಆದೇಶವನ್ನು ಕೊಟ್ಟಿದ್ದಾರೆ. ಆದಷ್ಟು ಬೇಗ ಕೆಲಸವನ್ನು ಮಾಡಿಸಿ ಕೊಡುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು 30ನೇ ಪಟ್ಟಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 30ನೇ ಪಟ್ಟಿಯಲ್ಲಿರುವ 110 ಪ್ರಶ್ನೆಗಳ ಪೈಕಿ 66 ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಬೆಂಗಳೂರು-ಮೈಸೂರು ಮಧ್ಯೆ ಎಕ್ಸ್‌ಪ್ರೆಸ್ ಹೈವೇ ನಿರ್ಮಾಣಕ್ಕೆ ಭೂಸ್ವಾಧೀನ

3083 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು-ಮೈಸೂರು ಮಧ್ಯೆ ಎಕ್ಸ್-ಪ್ರೆಸ್ ಹೈವೇ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

2) ಹಾಗಿದ್ದಲ್ಲಿ, ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆ ಯಾವುದು?

3) ಈ ಯೋಜನೆಯ ಅಂದಾಜು ವೆಚ್ಚದ ಮೊತ್ತ ಎಷ್ಟು?

4) ಎಷ್ಟು ವಿಸ್ತೀರ್ಣದ ಭೂಮಿಯನ್ನು ಈ ಯೋಜನೆಗೆ ವಶಪಡಿಸಿಕೊಳ್ಳಲಾಗಿದೆ?